**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು-560 027**

ಸಂ:ಕರಾಸಾ:ಕೇಕ:ಸಂ:ಸಿ2: 468 : 478 :2019-20 ದಿನಾಂಕ: 14.06.2019

**ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ : 801 /2019**

**ವಿಷಯ :** ಒಲಂಪಿಯನ್ ಹಾಗೂ ಪ್ಯಾರಾ ಒಲಂಪಿಯನ್ಸ್‌ಗಳಿಗೆ ಗೌರವಾರ್ಥವಾಗಿ ನಿಗಮದ ಬಸ್ಸುಗಳಲ್ಲಿ ಪ್ರಯಾಣಿಸಲು ಉಚಿತ ಬಸ್ ಪಾಸ್ ವಿತರಿಸುವ ಬಗ್ಗೆ.

**ಉಲ್ಲೇಖ :** 1. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 533 ದಿನಾಂಕ 23/06/2003.
2. ಸುತ್ತೋಲೆ ಸಂಖ್ಯೆ 1139/2012 ದಿನಾಂಕ 16/08/2012.
3. ಸರ್ಕಾರ ಆದೇಶ ಸಂಖ್ಯೆ ಯುಸೇಇ 216 ಯುಸೇಕ್ರೀ 2016 ದಿನಾಂಕ 10.11.2016.

******

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ತನ್ನ ಸಾಮಾಜಿಕ ಹೊಣೆಗಾರಿಕೆಯಡಿಯಲ್ಲಿ ಹಾಗೂ ಗೌರವಾರ್ಥವಾಗಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಮಹನೀಯರಿಗೆ ಉಚಿತ ಬಸ್ ಪಾಸುಗಳನ್ನು ವಿತರಿಸುತ್ತಿದೆ.

ಅರ್ಜುನ ಪ್ರಶಸ್ತಿ ವಿಜೇತರು, ಒಲಂಪಿಯನ್ ಮತ್ತು ಪ್ಯಾರಾ ಒಲಂಪಿಯನ್‌ಗಳಿಗೆ ಗೌರವಾರ್ಥವಾಗಿ ಉಚಿತ ಬಸ್ ಪಾಸ್ ವಿತರಣೆ ಮಾಡಿ, ಸಾಮಾನ್ಯ, ವೇಗದೂತ, ಸೆಮಿ-ಡಿಲಕ್ಸ್, ಡಿಲಕ್ಸ್ ವಾಹನಗಳಲ್ಲಿ ಪ್ರಯಾಣಿಸಲು ಉಲ್ಲೇಖ-1 ರ ಸ್ಥಾಯಿ ಆದೇಶದಲ್ಲಿ ಅವಕಾಶ ನೀಡಲಾಗಿರುತ್ತದೆ. ಈ ಆದೇಶಕ್ಕೆ ಮುಂದುವರೆದು ಉಲ್ಲೇಖ-2 ರಲ್ಲಿ ಈ ಪಾಸುದಾರರು ರಾಜಹಂಸ, ವೋಲ್ವೋ ಬಸ್ಸುಗಳಲ್ಲಿ ಸಹ ಪ್ರಯಾಣಿಸಲು ಅನುಮತಿಸಲು ಆದೇಶ ಹೊರಡಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ-3 ರ ಸರ್ಕಾರದ ಆದೇಶದಲ್ಲಿ ಅರ್ಜುನ / ದ್ರೋಣಾಚಾರ್ಯ / ರಾಜೀವ್ ಗಾಂಧಿ ಖೇಲ್ ರತ್ನ / ಧ್ಯಾನಚಂದ್ ಪ್ರಶಸ್ತಿ ಪುರಸ್ಕೃತ ರಾಜ್ಯದ ಕ್ರೀಡಾ ಸಾಧಕರಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಪಾಸ್ ಸೌಲಭ್ಯ ನೀಡಲು ಅನುಮತಿ ನೀಡಿ ಆದೇಶಿಸಿರುತ್ತದೆ. ಅದರನ್ವಯ ಅರ್ಜುನ / ದ್ರೋಣಾಚಾರ್ಯ / ರಾಜೀವ್ ಗಾಂಧಿ ಖೇಲ್ ರತ್ನ ಮತ್ತು ಧ್ಯಾನಚಂದ್ ಪ್ರಶಸ್ತಿ ಪುರಸ್ಕೃತ ಕರ್ನಾಟಕ ರಾಜ್ಯದ ಕ್ರೀಡಾಪಟುಗಳಿಗೆ ಗೌರವಾರ್ಥವಾಗಿ ನೀಡುತ್ತಿದ್ದ ಉಚಿತ ಬಸ್ ಪಾಸ್‌ಗಳನ್ನು ಅಗತ್ಯ ನಿಯಮಾವಳಿಗಳೊಂದಿಗೆ ವಿತರಿಸಲು ಪ್ರತ್ಯೇಕ ಆದೇಶ ಹೊರಡಿಸಲಾಗಿರುತ್ತದೆ.

ಮುಂದುವರೆದು, ಒಲಂಪಿಯನ್ ಹಾಗೂ ಪ್ಯಾರಾ ಒಲಂಪಿಯನ್ಸ್‌ಗಳಿಗೆ ಗೌರವಾರ್ಥವಾಗಿ ವಿತರಣೆ ಮಾಡಲಾಗುತ್ತಿರುವ ಉಚಿತ ಪಾಸು ವ್ಯವಸ್ಥೆಯನ್ನು ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ ಮುಂದುವರೆಸಲು ಆದೇಶಿಸಲಾಗಿದೆ.

I. <u>ಪಾಸು ವಿತರಣಾ ವಿಧಾನ</u> :

1) ಪ್ರಶಸ್ತಿ ಪುರಸ್ಕೃತರಿಗೆ ಪಾಸುಗಳನ್ನು ಸಂಚಾರ (ವಾಣಿಜ್ಯ) ಇಲಾಖೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕಛೇರಿ, ಬೆಂಗಳೂರಿನಿಂದ ವಿತರಿಸಲಾಗುವುದು.

2) ಪಾಸುಗಳನ್ನು ಪಡೆಯಲು ಫಲಾನುಭವಿಗಳು ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುವುದು ಕಡ್ಡಾಯವಿರುತ್ತದೆ.

ಅ. ಪಾಸು ವಿತರಣೆಗೆ ಕೋರಿ ಸ್ವಯಂ ಸಹಿಗೊಳಸಿರುವ ಅರ್ಜಿ,

ಆ. ಎರಡು ಸ್ಟಾಂಪ್ ಅಳತೆಯ ಭಾವಚಿತ್ರಗಳು,

ಇ. ಪ್ರಶಸ್ತಿ ಪ್ರಮಾಣ ಪತ್ರದ ಪ್ರತಿ,

ಉ. ಆಧಾರ್ ಕಾರ್ಡ್‌ನ ಪ್ರತಿ,

## II. ಪ್ರಯಾಣ ಸೌಲಭ್ಯ :

1) ಈ ಪಾಸುದಾರರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವಾಹನಗಳಲ್ಲಿ ಪ್ರಯಾಣಿಸಬಹುದು.
2) ರಾಜ್ಯ ರಸ್ತೆ ಸಾರಿಗೆ ನಿಗಮಗಳ ನಗರ, ಹೊರವಲಯ, ವೇಗದೂತ, ಅರೆಸುವಿಹಾರಿ ರಾಜಹಂಸ ಹಾಗೂ ವೋಲ್ವೋ ವರ್ಗದ ಬಸ್ಸುಗಳಲ್ಲಿ ಪ್ರಯಾಣಿಸಬಹುದಾಗಿದೆ.
3) ಈ ಪಾಸುದಾರರು ರಾಜ್ಯದೊಳಗೆ ಮತ್ತು ಅಂತರರಾಜ್ಯ ಮಾರ್ಗಗಳಲ್ಲಿ, ಎಲ್ಲಿಂದ ಎಲ್ಲಿಗಾದರೂ ಪ್ರಯಾಣಿಸಬಹುದಾಗಿದೆ.

## III. ಚಾಲನಾ ಸಿಬ್ಬಂದಿಗಳ /ತನಿಖಾ ಸಿಬ್ಬಂದಿಗಳ ಜವಾಬ್ದಾರಿಗಳು :

1) ಪಾಸುದಾರರು ಬಸ್ಸಿನಲ್ಲಿ ಪ್ರಯಾಣಿಸುವಾಗ, ಬಸ್ಸಿನ ನಿರ್ವಾಹಕರು ಸದರಿ ಪಾಸ್ ಸಂಖ್ಯೆಯನ್ನು ಮತ್ತು ಅವರು ಪ್ರಯಾಣಿಸಬೇಕಾದ ಮಾರ್ಗವನ್ನು ಇಟಿಎಂನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು.
2) ತನಿಖಾ ಸಿಬ್ಬಂದಿಗಳು ಬಸ್ಸಿನ ತನಿಖಾ ವೇಳೆಯಲ್ಲಿ ಫಲಾನುಭವಿ ಪಾಸುದಾರರು ಪ್ರಯಾಣಿಸುವ ಮಾಹಿತಿ ಇಟಿಎಂನಲ್ಲಿ ದಾಖಲಾಗಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.

## IV. ವಿಭಾಗ / ಘಟಕ ಮಟ್ಟದಲ್ಲಿನ ಕರ್ತವ್ಯಗಳು :

1) ಈ ಪಾಸುದಾರರು ಪ್ರಯಾಣಿಸುವ ವಿವರಗಳು ಇಟಿಎಂನಲ್ಲಿ ದಾಖಲಾಗುವುದರಿಂದ, ಘಟಕದ ಸಂಬಂಧಿಸಿದ ಸಿಬ್ಬಂದಿಗಳು, ಡಿಸಿಎಸ್ ಹಾಗೂ ಇಟಿಎಂ ತಂತ್ರಾಂಶದಿಂದ ಡೌನ್‌ಲೋಡ್ ಮಾಡಿಕೊಂಡು ಅಗತ್ಯ ತಃಖ್ತೆಯಲ್ಲಿ ನಿರ್ವಹಿಸುವುದು.
2) ವಿಭಾಗೀಯ ಕಛೇರಿಯವರು ಪ್ರತಿ ತಿಂಗಳ ಅವಧಿಗೆ ಪಾಸುದಾರರ ಪ್ರಯಾಣದ ವಿವರಗಳನ್ನು (ಟಿಕೇಟ್ ಸಂಖ್ಯೆ, ಪಾಸಿನ ಸಂಖ್ಯೆ, ಎಲ್ಲಿಂದ-ಎಲ್ಲಿಗೆ, ಪ್ರಯಾಣ ದಿನಾಂಕ, ಬಸ್ಸಿನ ವರ್ಗ, ಟಿಕೆಟ್ ದರದ ವಿವರಗಳು) ಕೇಂದ್ರ ಕಛೇರಿಯ ಸಂಚಾರ (ವಾಣಿಜ್ಯ) ಇಲಾಖೆಗೆ ಕಳುಹಿಸುವುದು.

## V. ಕೇಂದ್ರ ಕಛೇರಿಯಲ್ಲಿನ ಇಲಾಖೆಗಳ ಜವಾಬ್ದಾರಿಗಳು :

1) ಸಂಚಾರ (ವಾ) ಇಲಾಖೆಯಲ್ಲಿ ನಿಯಮಾವಳಿಗಳನ್ವಯ ಫಲಾನುಭವಿಗಳಿಗೆ ಬಸ್ ಪಾಸ್ ವಿತರಿಸುವುದು.
2) ಇಟಿಎಂ ಯಂತ್ರಗಳಲ್ಲಿ ಈ ವರ್ಗದ ಬಸ್ ಪಾಸುದಾರರ ಪ್ರಯಾಣವನ್ನು ದಾಖಲಿಸಲು ಅಗತ್ಯ ತಂತ್ರಾಂಶವನ್ನು ಮಾಹಿತಿ ತಂತ್ರಜ್ಞಾನ ಇಲಾಖೆಯವರು ಒದಗಿಸುವುದು.

## VI. ಇತರೆ ಷರತ್ತು ಮತ್ತು ನಿಬಂಧನೆಗಳು :

1) ಪಾಸುದಾರರು ಮುಂಗಡ ಟಿಕೆಟ್ ಶುಲ್ಕವನ್ನು ಪಾವತಿಸಿ ಆಸನಗಳನ್ನು ಕಾಯ್ದಿರಿಸಬಹುದಾಗಿದೆ.
2) ಪಾಸ್‌ನ್ನು ವರ್ಗಾವಣೆ ಮಾಡುವಂತಿಲ್ಲ.
3) ಫಲಾನುಭವಿಗಳು ಪ್ರತಿವರ್ಷ ಪಾಸ್‌ನ್ನು ನವೀಕರಿಸಬೇಕು.
4) ಪಾಸನ್ನು ಕಳೆದುಕೊಂಡಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ದೂರು ನೀಡಿ, ದೂರು ನೀಡಿರುವ ಬಗ್ಗೆ ಸ್ವೀಕೃತಿ ಪತ್ರದೊಂದಿಗೆ ಮನವಿ ಪತ್ರ ನೀಡುವುದು. ನಕಲು ಪಾಸನ್ನು ರೂ.100/- ದಂಡ ಪಾವತಿಸಿ ಪಡೆಯಬಹುದಾಗಿದೆ. ಒಂದು ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ನಕಲು ಪಾಸನ್ನು ವಿತರಿಸಲು ಅವಕಾಶವಿರುವುದಿಲ್ಲ.

5) ಫಲಾನುಭವಿಗಳು ಪಾಸ್‌ನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡು ಬಂದಲ್ಲಿ ಶಾಶ್ವತವಾಗಿ ಪಾಸು ವಿತರಣೆಯನ್ನು ರದ್ದುಪಡಿಸಲಾಗುವುದು.

ಈ ಸಾಮಾನ್ಯ ಸ್ಥಾಯಿ ಆದೇಶವನ್ನು ಎಲ್ಲಾ ಘಟಕಗಳಲ್ಲಿ ಸೂಚನಾ ಫಲಕಗಳಲ್ಲಿ ಪ್ರದರ್ಶಿಸುವುದು ಹಾಗೂ ಉಚಿತ ಪಾಸ್ ವ್ಯವಸ್ಥೆಯ ಚಾಲಕ:ನಿರ್ವಾಹಕರು / ಸಿಬ್ಬಂದಿ ವರ್ಗದವರಿಗೆ ಸೂಕ್ತ ಮಾಹಿತಿ / ತಿಳುವಳಿಕೆ ನೀಡುವುದು.

ಈ ಸಾಮಾನ್ಯ ಸ್ಥಾಯಿ ಆದೇಶವು ಈ ಕೂಡಲೇ ಜಾರಿಗೆ ಬರುತ್ತದೆ. ಉಲ್ಲೇಖಿತ 1 ಮತ್ತು 2 ರ ಸಾಮಾನ್ಯ ಸ್ಥಾಯಿ ಆದೇಶ ಹಾಗೂ ಸುತ್ತೋಲೆಯನ್ನು ಅನೂರ್ಜಿತಗೊಳಿಸಲಾಗಿದೆ. ಈ ಸ್ಥಾಯಿ ಆದೇಶ ಸ್ವೀಕರಿಸಿ ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿ ನೀಡುವುದು.

**(ಶಿವಯೋಗಿ ಸಿ ಕಳಸದ, ಭಾ.ಆ.ಸೇ)**
**ವ್ಯವಸ್ಥಾಪಕ ನಿರ್ದೇಶಕರು,**
**ಕ.ರಾ.ರ.ಸಾ.ನಿಗಮ.**

**ಪ್ರತಿಯನ್ನು:**

1. ವ್ಯವಸ್ಥಾಪಕ ನಿರ್ದೇಶಕರು, ಬೆಂ.ಮ.ಸಾ.ಸಂಸ್ಥೆ / ವಾ.ಕ.ರ.ಸಾ. ಸಂಸ್ಥೆ / ಈ.ಕ.ರ.ಸಾ. ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು/ಹುಬ್ಬಳ್ಳಿ/ಕಲ್ಬುರ್ಗಿರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು / ಘಟಕ ವ್ಯವಸ್ಥಾಪಕರು, ಕ.ರಾ.ರ.ಸಾ. ನಿಗಮರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂ.ಮ.ಸಾ.ಸಂಸ್ಥೆ /ವಾ.ಕ.ರ.ಸಾ.ಸಂಸ್ಥೆ / ಈ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು / ಹುಬ್ಬಳ್ಳಿ / ಕಲಬುರ್ಗಿರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
5. ಹಿರಿಯ / ಆಪ್ತ ಕಾರ್ಯದರ್ಶಿಗಳು, ಅಧ್ಯಕ್ಷರು / ಉಪಾಧ್ಯಕ್ಷರು / ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಭ&ಜಾ) / (ಸಿ&ಪ) ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.